ಪಿ.ಡಬ್ಲ್ಯು 1

(ಇಂದು ದಿನಾಂಕ 30-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ಸ.ನಂ. 482 ಹಿಸ್ಸಾ 2 ಡ 1 ರ ಪೈಕಿ 3 ಗುಂಟೆ 4 ಆಣೆ ಸ್ಥಳ ಮೃತ ಶಿವರಾಮ ನಾಯ್ಕ ವಾರಿಸುದಾರರ ಕಬ್ಜಾದಲ್ಲಿ ಇದೆ ಎಂದರೆ ಸರಿ. ಸದರಿ 3 ಗುಂಟೆ 4 ಆಣೆ ಸ್ಥಳದಲ್ಲಿ ಹಿಂದೆ ಇದ್ದ ಕಾಲು ದಾರಿಯಲ್ಲಿ ನಾನು ಹಾಗೂ ನನ್ನ ತರ್ಫೆ ಜನರು ತಿರುಗಾಡುತ್ತಿದ್ದರು ಎಂದರೆ ಸರಿಯಲ್ಲ. ನಾವು ಈ ದಾವಾ ದಾಖಲು ಪಡಿಸುವ 2-3 ವರ್ಷಗಳ ಪೂರ್ವದಲ್ಲಿ ಶಿವರಾಮ ಗೋವಿಂದ ನಾಯ್ಕ ಇವರ ವಾರಿಸುದಾರರು ಅವರ ತಾಬಾದಲ್ಲಿ ಇದ್ದ 3 ಗುಂಟೆ 4 ಆಣೆ ಸ್ಥಳದ ಸುತ್ತಲು ಪಾಗಾರವನ್ನು ನಿರ್ಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಕೌಂಪೌಂಡ್ ನಿರ್ಮಿಸುವ ವೇಳೆಗೆ ನಾವು ಅನಾದಿ ಕಾಲದಿಂದಲೂ ತಿರುಗಾಡುತ್ತಿದ್ದ ದಾರಿಯನ್ನು ಬಂದ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಶಿವರಾಮ ನಾಯ್ಕ ರವರ ವಾರಿಸುದಾರರು ನಾವು ತಿರುಗಾಡುತ್ತಿದ್ದ ದಾರಿಯನ್ನು ಬಂದ್ ಮಾಡಿದ್ದರಿಂದ ನೀವು ಪ್ರತಿವಾದಿಯವರನ್ನು ಆ ವೇಳೆಗೆ ಭೇಟಿ ಮಾಡಿ ನಾವು ತಿರುಗಾಡುತ್ತಿದ್ದ ದಾರಿಯನ್ನು ಶಿವರಾಮ ಗೋವಿಂದ ನಾಯ್ಕ ರವರ ವಾರಿಸುದಾರರು ಬಂದ್ ಮಾಡಿದ್ದರ ವಿರುದ್ಧ ಕೋರ್ಟಿಗೆ ಹೋಗಿ ಪ್ರತ್ಯೇಕ ವ್ಯಾಜ್ಯ ಹಾಕಿ ದಾರಿಯನ್ನು ತೆರವು ಮಾಡಿಕೊಡುತ್ತೇವೆ ಅಲ್ಲಿಯ ವರೆಗೆ ವಾದಿಯವರ ಜಾಗದಲ್ಲಿ ತಾತ್ಕಾಲಿಕವಾಗಿ ತಿರುಗಾಡಲು ಅನುಮಾಡಿಕೊಡುತ್ತೇವೆ ಎಂದು ಹೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಆ ರೀತಿ ಹೇಳಿದ್ದರಿಂದ ಸದರಿ ಜಾಗದಲ್ಲಿ ತಾತ್ಕಾಲಿಕವಾಗಿ ತಿರುಗಾಡಲು ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಅನಾದಿಕಾಲದಿಂದಲೂ ಹಕ್ಕು ಪ್ರಾಪ್ತವಾಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಕಾಲು ದಾರಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ಪರವಾನಿಗೆ ಮೇರೆಗೆ ತಾತ್ಕಾಲಿಕವಾಗಿ ತಿರುಗಾಡಲು ಅನುವು ಮಾಡಿಕೊಟ್ಟಿದ್ದನ್ನು

ದುರುಪಯೋಗಪಡಿಸಿಕೊಂಡು ಪ್ರತಿವಾದಿಯವರ ವಿರುದ್ಧ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಜಸಂಗತಿಯನ್ನು ಮುಚ್ಚಿಟ್ಟು ತರಾತುರಿಯಿಂದ ದಾರಿ ಹಕ್ಕನ್ನು ಖಾಯಂಗೊಳಿಸುವ ಉದ್ದೇಶದಿಂದ ಅಂದಾಜು ಮಾಹಿತಿ ಮೇರೆಗೆ ಈ ದಾವೆಯನ್ನು ದಾಖಲುಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರ ವಿರುದ್ಧ ಸುಳ್ಳು ದಾವೆ ದಾಖಲಿಸಿ ಅವರ ವಿರುದ್ಧ ಏಕಪಕ್ಷೀಯ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯಲ್ಲಿ ಬಲತ್ಕಾರದಿಂದ ಮೋಟರ್ ಸೈಕಲನ್ನು ಚಲಾಯಿಸುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರಿಗೆ ಅವರ ಜಾಗದಲ್ಲಿ ತುಳಸಿ ಪೂಜೆ ಮಾಡದಂತೆ ನ್ಯಾಯಾಲಯದಿಂದ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿರುವ 3 ಫೂಟ್ ದಾರಿಯು ಈಗಲೂ ಅಸ್ತಿತ್ವದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯವರ ಜಾಗದಲ್ಲಿದ್ದ ಮೂಲ ದಾರಿ ಇರುವುದಿಲ್ಲ ಬದಲಾಗಿ ಪರ್ಯಾಯ ದಾರಿ ಇರುತ್ತದೆ ಎಂದು ನುಡಿಯುತ್ತಾರೆ.

ಸದರಿ ಪರ್ಯಾಯ ದಾರಿಯು ಮೂಲ ದಾರಿಯಿಂದ 2 ಫೂಟ್ ಅಂತರದಲ್ಲಿ ಇರುತ್ತದೆ. ನಮಗೆ ಪ್ರತಿವಾದಿಯವರ ಜಾಗದಲ್ಲಿ ಮೂಲ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಪರ್ಯಾಯ ದಾರಿಯು ಶಿವರಾಮ ಗೋವಿಂದ ನಾಯ್ಕ ಇವರ ವಾರಿಸುದಾರರು ಕಂಪೌಂಡ್ ಹಾಕಿದ ನಂತರ ನಾವು ಪ್ರತಿವಾದಿಯರಲ್ಲಿ ಕೋರಿಕೊಂಡು ಅವರ ಅನುಮತಿಯ ಮೇರೆಗೆ ತಿರುಗಾಡುತ್ತಿರುವ ಕಾಲು ದಾರಿ ಎಂದರೆ ಸರಿಯಲ್ಲ. ನಾನು ಶಿವರಾಮ ಗೋವಿಂದ ನಾಯ್ಕ ಇವರ ವಾರಿಸುದಾರರ ಜಾಗದಲ್ಲಿ ಕಾಲು ದಾರಿ ಇದ್ದುದನ್ನು ಬಂದ್ ಮಾಡಿದ ನಂತರ ಆ ವಿಷಯವನ್ನು ಮುಚ್ಚಿಟ್ಟು ಅವರ ವಾಗಿಸುದಾರರನ್ನು ಪಕ್ಷಗಾರರನ್ನಾಗಿ ಸೇರಿಸದೇ ಈ ಪ್ರದಿವಾಯವರ ವಿರುದ್ಧ ಮಾತ್ರ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ದಾವಾಸ್ತಿಗೆ ಸಂಬಂಧಪಟ್ಟಂತೆ ಕಮೀಷನರನ್ನು ನೇಮಕ ಮಾಡಲು ನನ್ನ ತಕರಾರು ಇರುವುದಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಹಾಗೂ ಫೋಟೋಗಳು ದಾವಾಸ್ತಿಯ ವಸ್ತು ಸ್ಥಿತಿಯಂತೆ ಇರುವುದಿಲ್ಲ ಎಂದರೆ ಸರಿಯಲ್ಲ. ಖಾಯಂ ತಿರುಗಾಡುವ

ದಾರಿ ಸ.ನಂ. 482/2ಡ1 ಒಟ್ಟು ಕ್ಷೇತ್ರ 6 ಗುಂಟೆ 8 ಆಣೆ ಪೈಕಿ ಶಿವರಾಮ ನಾಯ್ಕು ಇವರ ವಾರಿಸುದಾರರ ಇವರ ವೈವಾಟಿನಲ್ಲಿರುವ 3 ಗುಂಟೆ 4 ಆಣೆ ಸ್ಥಳದಲ್ಲಿ ಇರುತ್ತದೆ ವಿನಹ ಪ್ರತಿವಾದಿಯವರ ಹಕ್ಕಿನ ಯಾವುದೇ ಸ್ಥಳದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಶಾಶ್ವತ ಕಾಲುದಾರಿಯ ಅವಶ್ಯಕತೆ ಇದ್ದಲ್ಲಿ ಶಿವರಾಮ ಗೋವಿಂದ ನಾಯ್ಕರವರ ವಾರಸುದಾರರ ವಿರುದ್ದ ದಾವಾ ದಾಖಲಿಸಬೇಕೆ ವಿನಹ ಪ್ರತಿವಾದಿಯವರ ವಿರುದ್ದ ದಾಖಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಅನಕ್ಷರಸ್ಥ ಹಾಗೂ ಬಡವರಾದ ಪ್ರತಿವಾದಿಯವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಲುಕ್ಸಾನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ